## 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS 218/2021** **PW- 1**

ದಿಃ **03.12.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿಸವಾಲುಃ ಪ್ರತಿವಾದಿ ನಂ.**1** ಪರ ಡಿ ಡಿ ಡಬ್ಲ್ಯೂ ವಕೀಲರಿಂದಃ

ನಾನು ಇಂಜನಿಯರಿಂಗ ಓದಿರುತ್ತೇನೆ. CTS No.161/ಎ ಹಾಗೂ CTS No. 161/ಬಿ ಇವುಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. CTS No.161/ಎ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಲು ನನಗೆ ತೊಂದರೆ ಇಲ್ಲ. 1983 ರಲ್ಲಿ ನಮ್ಮ memorandum of partition deed ಆಗಿರುತ್ತದೆ. ಸದರಿ ಸಮಯದಲ್ಲಿ ನಾನು ಹಾಗೂ ಪ್ರತಿವಾದಿ ನಂ.2 ಮತ್ತು 3 ಅಪ್ರಾಪ್ತ ವಯಸ್ಸಿನವರು ಆಗಿದ್ದೆವು ಎಂದರೆ ಸರಿ. ನಾವು ಅಪ್ರಾಪ್ತ ವಯಸ್ಸಿನವರು ಆದ ಕಾರಣ ನಮ್ಮ ಶಿಕ್ಷಣ ಹಾಗೂ ಇತರೆ ಖರ್ಚುಗಳಿಗೊಸ್ಕರ ನಮ್ಮ ತಂದೆ ಆ ರೀತಿ memorandum of partition deed ಮಾಡಿದ್ದರು ಎಂದರೆ ಸುಳ್ಳು. ಸದರಿ memorandum of partition deed ನೊಂದಾಯಿತ ದಾಖಲೆ ಅಲ್ಲ. ಸಾಕ್ಷಿ ಮುಂದುವರೆದು ಸದರಿ ದಾಖಲೆ ಪ್ರಕಾರ Act upon ಆಗಿದೆ. ದಿಃ 21.08.2010 ರಂದು ನಿಮ್ಮ ತಂದೆ ಹಾಗೂ ನೀವು ಸೇರಿ ಕುಟುಂಬದ ಅವಶ್ಯಕತೆಗಾಗಿ ಹಾಗೂ ಶಿಕ್ಷಣಕ್ಕಾಗಿ ಎಂದು ಸರ್ವೆ ನಂ.161/ಎ ರ ಅರ್ಧ ಭಾಗವನ್ನು ಶೈಲೇಶ ಪಟೇಲ ಹಾಗೂ ಶ್ರೀಮತಿ ಸೊನಲ ಪಟೇಲ ಎಂಬುವರಿಗೆ ಮಾರಾಟ ಮಾಡಿರುತ್ತೀರಿ ಎಂದರೆ ಸಾಕ್ಷಿ ಹೌದು ಅದಕ್ಕೆ ಪ್ರತಿವಾದಿ ನಂ.2 ಮತ್ತು 3 ಸಮ್ಮತಿ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಂತರ ಪ್ರತಿವಾದಿ ನಂ.2 ಹಾಗೂ 3 ಆಸ್ತಿಗಳಲ್ಲಿ ಭಾಗ ಕೊಡಿ ಎಂದು ಪ್ರತಿವಾದಿ ನಂ .1 ಇವರಿಗೆ ಕೇಳಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯದಲ್ಲಿ ಪ್ರತಿವಾದಿ ನಂ.1 ಇವರು ಪ್ರತಿವಾದಿ ನಂ. 2 ಮತ್ತು 3 ಇವರಿಗೆ ಸದರಿ ಆಸ್ತಿಯಲ್ಲಿ ಸಮಾನ ಹಿಸ್ಸೆ ನೀಡಬೇಕು ಎಂದು ನನಗೆ ಹೇಳಿದರು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ 161/ಬಿ ಪೂರ್ತಿ ಆಸ್ತಿಯನ್ನು ಪ್ರತಿವಾದಿ ನಂ.2 ಮತ್ತು 3 ಅವರಿಗೆ ಬಿಟ್ಟುಕೊಡೋಣ ಎಂದು ಪ್ರತಿವಾದಿ ನಂ.1

ನನಗೆ ಹೇಳಿದ್ದರು ಎಂದರೆ ನಿಜ. ಅದನ್ನು ನಾನು ಒಪ್ಪಿಕೊಳ್ಳಲಾರದೇ ನನ್ನ ತಂದೆಯನ್ನು ಸಹ ಮನೆಯಿಂದ ಹೊರಗಡೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರತಿವಾದಿ ನಂ.1 ಇವರು ತಮ್ಮಿಷ್ಟಕ್ಕೆ ತಾವೇ ಪ್ರತಿವಾದಿ ನಂ.2 ಮತ್ತು 3 ಇವರ ಮನೆಗೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ತಮ್ಮಿಷ್ಟಕ್ಕೆ ತಾವೇ ನನ್ನ ತಂದೆ ಅವರ ಮನೆಗೆ ಹೋಗಿರುತ್ತಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಆಸ್ತಿ ಕೊಡುತ್ತಿಲ್ಲ ಎಂಬ ಕಾರಣಕ್ಕೆ ಪ್ರತಿವಾದಿ ನಂ.2 ಮತ್ತು 3 ಸಹ ಪ್ರತಿವಾದಿ ನಂ.1 ಇವರ ಮೇಲೆ ಸಿಟ್ಟಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾವು ನಮ್ಮ ತಂದೆಗೆ ಹೊರಗೆ ಹಾಕಿದ ಕಾರಣ ಅವರು ನಿರ್ಗತಿಕರಾದ ಕಾರಣ ನನ್ನ ಹಾಗೂ ಪ್ರತಿವಾದಿ ನಂ.2 ಮತ್ತು 3 ಇವರ ವಿರುದ್ದ ಎ ಸಿ ಕಚೇರಿಯಲ್ಲಿ ಕೇಸ ಹಾಕಿದ್ದರು ಎಂದರೆ ನಿಜ ಆದರೆ ಸದರಿ ಕೇಸ ಸುಳ್ಳಾಗಿರುತ್ತದೆ. ಸದದಿರಿ ಪ್ರಕರಣದಲ್ಲಿ ವಿಚಾರಣೆ ನಡೆದು ಕೆಳ ಅಂತಸ್ತಿನಲ್ಲಿ ನಮ್ಮ ತಂದೆಗೆ ವಾಸವಾಗಲು ಕೊಡಬೇಕು ಹಾಗೂ ಮೊದಲನೇ ಅಂತಸ್ತಿನಲ್ಲಿ ನಾನು ವಾಸವಾಗಬೇಕು ಎಂದು ಆದೇಶವಾಯಿತು ಎಂದರೆ ಸರಿ. ಸದರಿ ಆದೇಶ ಪ್ರಕಾರ ನಾವು ಪ್ರತಿವಾದಿ ನಂ.1 ಇವರಿಗೆ ಕಿರುಕುಳ ನೀಡಬಾರದು ಎಂದೂ ಸಹ ಆದೇಶವಾಗಿದೆ ಎಂದರೆ ಸಾಕ್ಷಿ ನಾವು ಯಾವದೇ ರೀತಿ ಕಿರುಕುಳ ನೀಡಿಲ್ಲ ಎಂದು ನುಡಿಯುತ್ತಾರೆ. ಸದರಿ ಆದೇಶವನ್ನು ಪಾಲನೆ ಮಾಡಿಸುವ ಉದ್ದೇಶದಿಂದ ಸಬ್ ಅರ್ಬನ್ ಪೊಲಿಸ್ ಠಾಣೆ ಆದೇಶ ಮಾಡಲಾಗಿತ್ತು ಎಂದರೆ ನಿಜ.

2. CTS No.161/ಎ ಹಾಗೂ CTS No.161/ಬಿ ಎರಡು ಆಸ್ತಿಗಳು ಸಮನಾದ ಕ್ಷೇತ್ರ ಹೊಂದಿವೆ ಎಂದರೆ ಸಾಕ್ಷಿ CTS No.161/ಎ ಸ್ವಲ್ಪ ಮಟ್ಟಿಗೆ ದೊಡ್ಡ ಆಸ್ತಿಯಾಗಿದೆ ಎಂದು ನುಡಿಯುತ್ತಾರೆ. CTS No.161/ಎ ಆಸ್ತಿಯಲ್ಲಿ ಉಳಿದ ಅರ್ದ ಆಸ್ತಿಯಲ್ಲಿ ಅರ್ದ ಭಾಗವನ್ನು ತಮ್ಮ ಜೀವನೊಪಾಯಗೊಸ್ಕರ ಪ್ರತಿವಾದಿ ನಂ.1 ಮಾರಾಟ ಮಾಡಿರುತ್ತಾರೆ ಎಂದರೆ ಸರಿ. CTS No.161/ಎ ಆಸ್ತಿಯನ್ನು ಸೇರ್ಪಡೆ ಮಾಡದೇ CTS No.161/ಬಿ ಆಸ್ತಿಯಲ್ಲಿ ಮಾತ್ರ ಪಾಲು ವಿಬಾಗ ಕೇಳಿದ್ದರಿಂದ ಪ್ರಸ್ತುತ ದಾವೆ ಊರ್ಜಿತವಲ್ಲ ಎಂದರೆ ಸಾಕ್ಷಿ CTS No.161/ಎ ರಲ್ಲಿ ನನ್ನ ಹೆಸರಿನಲ್ಲಿದ್ದ ಸ್ವಲ್ಪ ಭಾಗ ಮಾತ್ರ ಉಳಿದಿದೆ ಎಂದು ನುಡಿಯುತ್ತಾರೆ. ಪೂರ್ತಿ ಆಸ್ತಿಯಲ್ಲಿ ನಾನು ಹಾಗೂ ನನ್ನ ತಂದೆ ಈಗಾಗಲೇ ಅರ್ದ ಅರ್ದ ಬಾಗ ಪಡೆದುಕೊಂಡ ಕಾರಣ CTS No.161/ಬಿ ಇದು ಪ್ರತಿವಾದಿ ನಂ.2 ಮತ್ತು 3 ಇವರಿಗೆ ಸೇರಬೇಕು ಎಂದು ಪ್ರತಿವಾದಿ ನಂ.1 ಇವರ ಇಚ್ಚೆ

ಇದ್ದರೂ ಸಹ ನಾನು ಪೂರ್ತಿ ಆಸ್ತಿಯನ್ನು ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

**ಪ್ರತಿವಾದಿ ನಂ.2 ಮತ್ತು 3 ಪರ ವಕೀಲರ ಪರವಾಗಿ ಪಾಟಿಸವಾಲು ಮಾಡಲು ಪ್ರತಿವಾದಿ ನಂ.1 ಪರ ವಕೀಲರು ಕಾಲಾವಕಾಶ ಕೇಳಿದ್ದು ನೀಡಿ ಮುಂದೂಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

Sd/-
**(**ಶ್ರೀಮತಿ ದೀಪಾ ಜಿ ಮನೇರಕರ**)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.